ಈ ಸಂಗೀತದ ಪರಿಚಾರಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾಳೆ. ಇವೆಲ್ಲವೂ ನನ್ನ ಅಮ್ಮನ ಆಶಯ, ಗುರುಗಳ ಆಶೀರ್ವಾದದಿಂದಷ್ಟೇ ನಡೆದಿದೆ ಎಂದು ಹೇಳಬಲ್ಲೆ.

**◆ ಹೆಚ್ಚು ಜನರಿಗೆ ಸಂಗೀತವು ತಲುಪಬೇಕು ಎಂಬ ಆಶಯದೊಂದಿಗೆ ಆರಂಭವಾದ ಈ ಶಿಬಿರವು ಪ್ರಸ್ತುತ ರಜತ ಮಹೋತ್ಸವವನ್ನು ಆಚರಿಸುತ್ತಿದೆ. ಹಾಗಿದ್ದರೆ ನಿಮ್ಮ ಮುಂದಿನ ಯೋಜನೆಗಳೇನು?**

ಈ ಮೂಲ ಆಶಯವು ಸದಾ ನನ್ನೊಡನೆ ಇರುತ್ತದೆ. ಸಂಗೀತ ಶಿಬಿರಕ್ಕೆ ಪ್ರತೀವರ್ಷ ವಿವಿಧೆಡೆಗಳಿಂದ ಸಂಗೀತ ಆಸಕ್ತರು ಬಂದು ಕಲಿತು ಹೋಗುತ್ತಾರೆ. ಅನೇಕರು ಈ ಶಿಬಿರದ ನಂತರ ತಮ್ಮ ಜೀವನವನ್ನೇ ಸಂಗೀತಕ್ಕೆ ಮುಡಿಪಾಗಿ ಇಟ್ಟಿರುವ ಉದಾಹರಣೆಗಳಿವೆ. ಅಂದರೆ ಕಲಿಯುವ ವಾತಾವರಣ ಒದಗಿಸಿಕೊಟ್ಟರೆ ಆಸಕ್ತರು ಪ್ರಯತ್ನ ಮಾಡುತ್ತಾರೆ. ಮಂಗಳೂರಿನಲ್ಲಿ ಕಲಾಶಾಲೆ ಎಂಬ ಸಂಗೀತ ಶಾಲೆಗೆ ನಾನು ಆಗಾಗ ಭೇಟಿ ಕೊಟ್ಟಾಗ ಮಕ್ಕಳ ಮುಖದಲ್ಲಿರುವ ಆಸಕ್ತಿ, ಹೊಸದನ್ನು ಅರಗಿಸಿಕೊಳ್ಳುವ ಪ್ರಯತ್ನವನ್ನು ಗುರುತಿಸಿದ್ದುಂಟು. ಮಕ್ಕಳು ಇಷ್ಟಪಡುವ ಸಂಗೀತವನ್ನು ಕಲಿಯುವ ಅವಕಾಶ ಕಲ್ಪಿಸುವ ಸಂಗೀತ ವಿಶ್ವವಿದ್ಯಾಲಯವನ್ನು ರೂಪಿಸಬೇಕೆಂಬುದು ನನ್ನ ಕನಸು. ಅಮ್ಮನ ಕನಸಿನಂತೆಯೇ ನನ್ನ ಕನಸು ಸಾಕಾರವಾಗುವ ದಿನಕ್ಕಾಗಿ ಕಾಯುವೆ.

**◆ ಸಂಗೀತದ ಆರಂಭಿಕ ಗುರುಗಳಾಗಿ ನಿಮ್ಮ ತಾಯಿಯೇ ಒದಗಿ ಬಂದರು. ನಂತರದಲ್ಲಿ ನಿಮ್ಮನ್ನು ರೂಪಿಸಿದ ಗುರು ಪರಂಪರೆಯ ಬಗ್ಗೆ ಹೇಳುವಿರಾ?**

ನನಗೆ ಒದಗಿ ಬಂದ ಗುರುಪರಂಪರೆ ನನ್ನ ಸೌಭಾಗ್ಯವೇ ಸರಿ. ಯಾಕಂದ್ರೆ ಸಂಗೀತವನ್ನು ಅದಮ್ಯವಾಗಿ ಪ್ರೀತಿಸುವ ಕುಟುಂಬದಲ್ಲಿ ನಾನು ಹುಟ್ಟಿದೆ. ಸಂಗೀತವನ್ನು ಕಲಿತಿರುವ ಅಮ್ಮನೇ ಮೊದಲ ಗುರುವಾಗಿದ್ದರು. ಅಜ್ಜನೂ ಸಂಗೀತ ಕಲಾವಿದರು. ಇದಕ್ಕೂ ಮಿಗಿಲಾಗಿ ಅಮ್ಮನಿಗೆ ಸಂಗೀತ ಕ್ಷೇತ್ರದ ಕುರಿತು ಸದಾಶಯಭರಿತ ಒಳನೋಟಗಳಿದ್ದವು. ಒಳ್ಳೆಯ ಸಂಗೀತವು ಹೆಚ್ಚು ಜನರಿಗೆ ತಲುಪಬೇಕು, ಮಕ್ಕಳಿಗೆ ಕಲಿಸುವುದೇ ಸಂಗೀತವನ್ನು ಮುಂದೆ ದಾಟಿಸಬಹುದಾದ ಏಕೈಕ ಮಾರ್ಗ ಎಂದು ಅವರು ನಂಬಿದ್ದರು. ಶಿವಮೊಗ್ಗದಲ್ಲಿ ನನಗೆ ಹೊಸಹಳ್ಳಿ ವೆಂಕಟ್ರಾಮ್ ಗುರುಗಳಾಗಿದ್ದಾಗ ನಾನು ಆರಂಭಿಕ ಹಂತವನ್ನು ಕಲಿತೆ. ಇದೇ ಅವಧಿಯಲ್ಲಿ ಅವರು ತಮ್ಮ ಬಳಿಗೆ ಪಾಠಕ್ಕೆ ಬರುತ್ತಿದ್ದ ವಿದ್ಯಾರ್ಥಿಗಳಿಗೆ ಪಾಠ ಮಾಡುವಂತೆ ಹೇಳಿದ್ದುಂಟು. ಇದೇ ಅವಧಿಯಲ್ಲಿ ನನಗೆ ಸಂಗೀತದಲ್ಲಿ ಏನೋ ಸಾಧಿಸುವುದಿದೆ ಎಂಬ ಅರಿವು ಮೂಡಿದ್ದು. ವಯೊಲಿನ್‌ನನ್ನು ಪ್ರೀತಿಸಲು ತೊಡಗಿದ್ದು. ಶಿವಮೊಗ್ಗಕ್ಕೆ ಬಂದಿದ್ದ ಚೆನ್ನೈಯ ಸಂಗೀತ ಗುರು ಟಿ. ರುಕ್ಮಿಣಿ ಅವರ ಪರಿಚಯವಾಗಿ, ಅವರಿಗೆ ಕನ್ನಡ ತಿಳಿದಿದ್ದರಿಂದ ನಾನು ಹೆಚ್ಚಿನ ಕಲಿಕೆಗೆ ಚೆನ್ನೈಗೆ ತೆರಳಿದೆ. ಅಲ್ಲಿ ಒಂದು ವರ್ಷ ಪಾಠ ಹೇಳಿಸಿಕೊಂಡಾಗ ಕೃಷ್ಣಗಾನ ಸಭಾದಲ್ಲಿ ನಾನು ಸ್ಪರ್ಧೆಯೊಂದರಲ್ಲಿ ಭಾಗವಹಿಸಿ ಬಹುಮಾನ ಪಡೆದೆ. ಬಹುಮಾನ ವಿತರಣೆಗೆ ಸಂಗೀತ ದಿಗ್ಗಜ ಲಾಲ್‌ಗುಡಿ ಜಿ. ಜಯರಾಮನ್ ಅವರು ಬಂದಿದ್ದರು. ಬಹುಮಾನ ಕೊಡುತ್ತ, ನೀನೊಮ್ಮೆ ನಮ್ಮ ಮನೆಗೆ ಬಂದು ನನ್ನನ್ನು ಭೇಟಿಯಾಗು ಎಂದೂ ಹೇಳಿದ್ದರು. ಅಂತಹ ದಿಗ್ಗಜರು ಈ ಮಾತು ಹೇಳಿದ್ದೇ ಪ್ರಸಾದವಾಗಿತ್ತು. ಅವರ ಮನೆಗೆ ಹೋದಾಗ, ಆದರದಿಂದ ಬರ ಮಾಡಿಕೊಂಡ ಅವರು ಒಂದೆರಡು ಕೃತಿಗಳನ್ನು ಹಾಡುವಂತೆ ಹೇಳಿದರು. ಅವರಿಗೆ ಇಷ್ಟವೆನಿಸಿ ಅವರ ಶಿಷ್ಯನಾಗಿ ಅವರ ಮನೆಯಲ್ಲಿಯೇ ವಾಸವಾಗಿದ್ದೆ. ಗುರುಕುಲ ವಾಸದ ಅವಕಾಶ ನನಗೆ ಒದಗಿಬಂತು. ಅವರು ನನಗೆ ಕೇವಲ ಸಂಗೀತದ ಗುರುಗಳಷ್ಟೇ ಅಲ್ಲ. ಜೀವನ ಶೈಲಿ, ಶಿಸ್ತು, ಸಾಧನೆಯ ಪಥವನ್ನು ಕಲಿಸಿದ ಗುರುಗಳು. ಮಾತಿಗೆ ತಪ್ಪದ, ಶಿಸ್ತನ್ನು ಕೊಂಚವೂ ಸಡಿಲಿಸದ ಅವರ ವ್ಯಕ್ತಿತ್ವ ಎಲ್ಲರಿಗೂ ಮಾದರಿ. ನಾನು ಸಂಗೀತ ಕಛೇರಿ ಮಾಡುತ್ತಿದ್ದಾಗ ನನಗೆ ಕೆಲವೆಡೆ 'ಮರಿಲಾಲ್ ಗುಡಿ' ಎಂದು ಹೇಳುತ್ತಿದ್ದರು. ನಾನು ಹೆಮ್ಮೆಯಿಂದ ಬೀಗುತ್ತಿದ್ದೆ. ಆದರೆ ದಿನಕಳೆದಂತೆ ಅವರ ನಾದವೈಖರಿಯ ಮುಂದೆ ನಾನೆಷ್ಟು ಚಿಕ್ಕವನು ಎಂಬ ಅರಿವಾಯಿತು. ಈ ಅರಿವು ನನ್ನ ಕಲಿಕೆಯನ್ನು ತೀವ್ರಗೊಳಿಸಿತು,

